ಪ್ರಕರಣದ ಪ್ರಮುಖ ಆರೋಪಿ ಶಂಕರ ನಿಂಗಪ್ಪ ಕುಂದರಗಿ, ಎ. ಹೆಚ್..ಸಿ. 221 (ಆರ್ಮರ್) ಬೆಳಗಾಂ ಶಸ್ತ್ರಾಸ್ತ್ರ ಸಂಗ್ರಹ ಕೊಠಡಿಯ ಉಸ್ತುವಾರಿ ಅಧಿಕಾರಿಯಾಗಿದ್ದು ಅವರೇ ಸ್ವತಃ ಸ್ವಂತ ಲಾಭಕ್ಕಾಗಿ ಮೇಲ್ಕಂಡ ಶಸ್ತ್ರಾಸ್ತ್ರಗಳನ್ನು ಕಳುವು ಮಾಡಿ ದುರುಪಯೋಗ ಪಡಿಸಿಕೊಂಡಿರುತ್ತಾರೆ. ದಿನಾಂಕ 19-4-2002 ರಿಂದ ಶ್ರೀ ಶಂಕರ ನಿಂಗಪ್ಪ ಕುಂದರಗಿ ರವರು ಅಮಾನತ್ತಿನಲ್ಲಿದ್ದಾರೆ ಮತ್ತು ಈತನ ಹಾಗೂ ಇತರರ ವಿರುದ್ಧ ಬೆಳಗಾಂ ಮಾರ್ಕೆಟ್ ಪೊಲೀಸ್ ಠಾಣೆ ಅಪರಾಧ ಸಂಖ್ಯೆ:59:2002 ಕಲಂ 381 465, 471, 409, 420, 201 ಸಹಕಲಂ 34 ಐ.ಪಿ.ಸಿ. ಮತ್ತು ಕಲಂ 7,27,29 ಆರ್ಮ್ಸ್ 13 (1) (ಸಿ), 13 (2) ಪ್ರಿವೆನ್‌ಷನ್ ಆಫ್ ಕರಪಶನ್ ಆಕ್ಟ್ 1988ನೇ ದ್ದರಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

ಅಜಾಗರೂಕತೆ ಮತ್ತು ಇತರೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಈ ಪ್ರಕರಣದಲ್ಲಿ ಶಾಮೀಲಾಗಿದ್ದಾರೆ ಎಂಬುದನ್ನು ಪತ್ತೆ ಹಚ್ಚಿ ಜವಾಬ್ದಾರಿಯನ್ನು ನಿಗಧಿಪಡಿಸಲು ಎಸ್.ಪಿ. ಬೆಳಗಾಂ ರವರು ಪ್ರಾಥಮಿಕ ವಿಚಾರಣೆಯನ್ನು ಇದೀಗ ನಡೆಸುತ್ತಿದ್ದಾರೆ.

ಆ) ಇಲ್ಲ.

ರಾಜ್ಯದಲ್ಲಿ ಆನ್ ಲೈನ್ ಲಾಟರಿ

333(201) - ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕರ್ನಾಟಕ ರಾಜ್ಯ ಲಾಟರಿಯ ಈಗಿನ ಪದ್ಧತಿಯನ್ನು ರದ್ದುಗೊಳಿಸಿ ಆನ್ ಲೈನ್ ಲಾಟರಿಯನ್ನು ಜಾರಿಗೆ ತರಲು ಸರ್ಕಾರ ನಿರ್ಧರಿಸಿದೆಯೇ?

ಆ) ಹಾಗಿದ್ದಲ್ಲಿ ಆನ್‌ಲೈನ್ ಲಾಟರಿಯನ್ನು ಸರ್ಕಾರದ ಪರವಾಗಿ ನಡೆಸಲು ಯಾರಿಗೆ ಲೈಸೆನ್ಸ್ ನೀಡಲಾಗಿದೆ ಹಾಗೂ ಈ ಆನ್‌ಲೈನ್ ಲಾಟರಿಯಿಂದ ರಾಜ್ಯಕ್ಕೆ ಬರತಕ್ಕ ಅಂದಾಜು ವರಮಾನವೆಷ್ಟು?

ಇ) ಸಿಕ್ಕಿಂ ರಾಜ್ಯದ ಲಾಟರಿಯನ್ನು ನಡೆಸುತ್ತಿರುವ ಕಂಪನಿಗೆ ರಾಜ್ಯ ಸರ್ಕಾರವೂ ಸಹ ಲೈಸೆನ್ಸ್ ನೀಡಿರುವುದು ನಿಜವಲ್ಲವೇ?

ಈ) ರಾಜ್ಯದಲ್ಲಿ ಈ ಸಿಕ್ಕಿಂ ರಾಜ್ಯದ ಆನ್‌ಲೈನ್ ಲಾಟರಿಯಿಂದ ಬಡವರು ಹಾಗೂ ಮಧ್ಯಮ ವರ್ಗದವರು ಮನೆಮಠ ಕಳೆದುಕೊಂಡು ನಿರ್ಗತಿಕರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಾಬು ರಾವ್ ಚಿಂಚಸನೂರ್ (ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ಸಚಿವರು):

ಅ) ಕರ್ನಾಟಕ ರಾಜ್ಯ ಸಾಂಪ್ರದಾಯಿಕ ಲಾಟರಿಯ ಬದಲು ಹಾಲಿ ಗಣಕೀಕೃತ ಆನ್‌ಲೈನ್ ಲಾಟರಿ ಯೋಜನೆಯನ್ನು ಪ್ರಾರಂಭಿಸುತ್ತಿಲ್ಲ. ಸಾಂಪ್ರದಾಯಕ ಲಾಟರಿ ಜತೆಗೆ ಈ ಲಾಟರಿಯನ್ನು ಪ್ರಾರಂಭಿಸಲು ನಿರ್ಧರಿಸಿದೆ.

ಆ) ಮೆ: ಅಲ್ಫಾ ಎಂಟರ್‌ಟೈನ್‌ಮೆಂಟ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್, ಇವರನ್ನು ಮಾರಾಟಕ್ಕೆ ಏಜೆಂಟರೆಂದು ನೇಮಕಾತಿ ಮಾಡಲಾಗಿದೆ. ಆನ್‌ಲೈನ್ ಲಾಟರಿಯಿಂದ ಮುಂದಿನ 5 ವರ್ಷಗಳಲ್ಲಿ ಈ ಕೆಳಕಂಡಂತೆ ಸರ್ಕಾರಕ್ಕೆ ನಿವ್ವಳ ಆದಾಯ ಬರುವ ನಿರೀಕ್ಷೆ ಇದೆ.

1ನೇ ವರ್ಷ: ರೂ. 100 ಕೋಟಿ ಅಥವಾ ಮಾರಾಟದ ಶೇಕಡ 21 ಇವುಗಳಲ್ಲಿ ಯಾವುದು ಹೆಚ್ಚೋ ಅದು.

2ನೇ ವರ್ಷ: ರೂ. 140 ಕೋಟಿ ಅಥವಾ ಮಾರಾಟದ ಶೇಕಡ 22 ಇವುಗಳಲ್ಲಿ ಯಾವುದು ಹೆಚ್ಚೋ ಅದು

3ನೇ ವರ್ಷ : ರೂ. 196 ಕೋಟಿ ಅಥವಾ ಮಾರಾಟದ ಶೇಕಡ 23.50 ಇವುಗಳಲ್ಲಿ ಯಾವುದು ಹೆಚ್ಚೋ ಅದು.

4ನೇ ವರ್ಷ: ರೂ. 275 ಕೋಟಿ ಅಥವಾ ಮಾರಾಟದ ಶೇಕಡ 24 ಇವುಗಳಲ್ಲಿ ಯಾವುದು ಹೆಚ್ಚೋ ಅದು.

5ನೇ ವರ್ಷ: ರೂ. 385 ಕೋಟಿ ಅಥವಾ ಮಾರಾಟದ ಶೇಕಡ 24.5 ಇವುಗಳಲ್ಲಿ ಯಾವುದು ಹೆಚ್ಚೋ ಅದು.

ಇ) ಇಲ್ಲ. "ಟಾಷಿ ಡಿಲೆಕ್ ಗೇಮಿಂಗ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್, "ಇವರು ಸಿಕ್ಕಿಂ ರಾಜ್ಯದ ಆನ್‌ಲೈನ್ ಲಾಟರಿಯನ್ನು ಮಾರಾಟ ಮಾಡುತ್ತಿದ್ದಾರೆ. ಕರ್ನಾಟಕ ರಾಜ್ಯವು ಮೆ:ಅಲ್ಫಾ ಎಂಟರ್‌ಟೈನ್‌ಮೆಂಟ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್, ಇವರನ್ನು ಗಣಕೀಕೃತ ನೆಟ್‌ವರ್ಕ್ ಲಾಟರಿ ಟಿಕೇಟ್ ಮಾರಾಟಕ್ಕಾಗಿ ಮಾರುಕಟ್ಟೆ ಏಜೆಂಟರೆಂದು ನೇಮಿಸಿದೆ.

ಈ) ಇಲ್ಲ.

ಬೆಂಗಳೂರು ಜಯನಗರದ ಕಾಸ್ಮಾಪಾಲಿಟಿನ್ ಕ್ಲಬ್‌ಗೆ ಬೆಂಗಳೂರು ಮಹಾನಗರ ಪಾಲಿಕೆ ಜಾಗವನ್ನು ವಾಪಸ್ಸು ಪಡೆಯುವುದು.

334(204) - ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು (ಶಿವಾಜಿನಗರ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಜಯನಗರ ಕಾಸ್ಮಾಪಾಲಿಟಿನ್ ಕ್ಲಬ್‌ಗೆ ಬೆಂಗಳೂರು ಮಹಾನಗರ ಪಾಲಿಕೆ ಗುತ್ತಿಗೆ ಆಧಾರದ ಮೇಲೆ ನೀಡಿದ್ದ ಜಾಗವೆಷ್ಟು?

ಆ) ಈ ಗುತ್ತಿಗೆ ಅವಧಿ ಯಾವಾಗ ಪೂರ್ಣಗೊಂಡಿದೆ:

ಇ) ಗುತ್ತಿಗೆ ಅವಧಿ ಪೂರ್ಣಗೊಂಡಿದ್ದರೂ ಸಹ ಈ ಜಾಗವನ್ನು ಬೆಂಗಳೂರು ಮಹಾನಗರ ಪಾಲಿಕೆ ತನ್ನ ವಶಕ್ಕೆ ತೆಗೆದುಕೊಳ್ಳದೇ ಇರಲು ಕಾರಣಗಳೇನು?

ಈ) ಈ ಜಾಗದಲ್ಲಿ ಖಾಸಗಿ ಕ್ಲಬ್ ಆಡಳಿತ ಕಛೇರಿ ಹಾಗೂ ಇತರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?